# ಪರ್ಯಾಯ ಕೆಲಸ ಒಂದಿರಲಿ!

**ಸುಷ್ಮಾ ನಾಣಯ್ಯ**
ಕಲರ್ಸ್ ಕನ್ನಡದ
'ಭಾಗ್ಯಲಕ್ಷ್ಮಿ'ಯ ಕಾವೇರಿ



**◆ ನಿಮ್ಮನ್ನು ನೀವು ಪರಿಚಯ ಮಾಡಿಕೊಳ್ಳುವುದಾದರೆ.**

ಮೂಲ ಕೊಡಗಿನ ಬಾಳೆಲೆ ಎಂಬ ಊರು. ಬೆಂಗಳೂರಿನಲ್ಲಿ ಬೆಳೆದೆ. ಅಮ್ಮ ಉಷಾ, ಅಪ್ಪ ಎ.ಕೆ. ನಾಣಯ್ಯ ಇಬ್ಬರೂ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಆಗಾಗ ವರ್ಗಾವಣೆ ಸಹಜವಾಗಿತ್ತು. ಆದ್ದರಿಂದ ದಾವಣಗೆರೆ, ಮೈಸೂರು, ಧಾರವಾಡದಲ್ಲಿ ಓದಿದೆ. ಧಾರವಾಡ ಸೀಮೆಯ ಹುಡುಗನನ್ನು ಇಷ್ಟಪಟ್ಟು ಮದುವೆ ಆಗಿದ್ದೇನೆ. ಮೂರು ವರ್ಷದ ಮಗಳಿದ್ದಾಳೆ. ಮೈಸೂರಿನಲ್ಲಿ ಮೈಕ್ರೊ ಬಯಾಲಜಿಯಲ್ಲಿ ಎಂಎಸ್ಸಿ ಮಾಡಿದೆ. ಆರು ತಿಂಗಳು ಕೆಲಸ ಮಾಡಿದ ನಂತರ ಕಿರುತೆರೆಗೆ ಬಂದೆ. ಓದುವಾಗಲೇ ಅಪ್ಪ ತೀರಿಕೊಂಡಿದ್ದರು. ಅಮ್ಮ ನನ್ನ ಆಸೆಗಳನ್ನು ಯಾವತ್ತೂ ಪ್ರೋತ್ಸಾಹಿಸುತ್ತಾ ಬೆಳೆಸಿದ್ದಾರೆ. ನನ್ನ ಪತಿ ಎಲ್ಲ ರೀತಿಯಲ್ಲೂ ನನ್ನ ಬೆನ್ನಿಗೆ ನಿಂತಿದ್ದಾರೆ. ನನ್ನ ವೃತ್ತಿ ಮತ್ತು ಹವ್ಯಾಸದ ವಿಷಯದಲ್ಲಿ ಯಾವ ರೀತಿಯಿಂದಲೂ ನಿರ್ಬಂಧ ಹಾಕುವುದಿಲ್ಲ.

**◆ ಹತ್ತರಿಂದ ಐದರವರೆಗಿನ ಕೆಲಸ ಮತ್ತು ಅಭಿನಯ ವೃತ್ತಿ ಹೇಗೆ ಅನ್ನಿಸುತ್ತದೆ?**

ಫಾರ್ಮಾಸಿಟಿಕಲ್ಸ್ ಕಂಪನಿಯೊಂದಕ್ಕೆ ಸೇರಿದೆ. ಜೂನಿಯರ್ ಸೈಂಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದೆ. ಕಾಲೇಜು ದಿನಗಳಲ್ಲಿ ಬಿಜಿಯಾಗಿದ್ದೆ. ನಾಟಕ, ಡಾನ್ಸ್, ಹಾಡು ಎನ್ನುವವಳಿಗೆ ಲೈಫ್ ಅಂದರೆ ಕಲರ್‌ಫುಲ್ ಅನ್ನಿಸಿತ್ತು. 10 ರಿಂದ 5 ಗಂಟೆಯ ಕೆಲಸ ಆರಂಭಿಸಿದ ಮೇಲೆ ಜೀವನದಲ್ಲಿ ಏನೂ ಇಲ್ಲವೇನೋ ಅನ್ನಿಸಿತು. ಜೀವನ ಯಾಂತ್ರಿಕ ಅನ್ನಿಸಿ ಏನು ಮಾಡುತ್ತಿದ್ದೇನೆ ಎನ್ನುವ ಪ್ರಶ್ನೆ ಕಾಡುತ್ತಿತ್ತು. ಈ ಸಮಯದಲ್ಲಿ ಪಿಎಚ್.ಡಿ ಮಾಡಬೇಕು ಎನ್ನುವ ದೃಷ್ಟಿಯಿಂದಲೇ ಕೆಲಸವನ್ನು ಬಿಟ್ಟೆ. ರಂಗಾಯಣಕ್ಕೆ ಕಲಾವಿದರನ್ನು ಹುಡುಕಿಕೊಂಡು ಕಸ್ತೂರಿ ವಾಹಿನಿಯಿಂದ ಬಂದಿದ್ದರು. ನಟ ಕೃಷ್ಣ ಪ್ರಸಾದ್, ನನಗೆ ಆಡಿಷನ್‌ಗೆ ಬರಲು ಕರೆದರು. ಹಣೆಬರಹ ಇಲ್ಲಿ ಇತ್ತು ಅನ್ನಿಸುತ್ತೆ. ಬಂದು ಆಡಿಷನ್ ನೀಡಿದೆ. ಅವಕಾಶ ಸಿಕ್ಕಿತು. ಇಲ್ಲಿ ಯಾವತ್ತೂ ಬೇಸರ ಅನ್ನಿಸಿಲ್ಲ. ವೃತ್ತಿ ಬದುಕಿನ ಮೊದಲ ಅರ್ಧ ಹೇಳುವಂತಹ ಯಶಸ್ಸು ಸಿಕ್ಕಿಲ್ಲ. 'ಭಾಗ್ಯಲಕ್ಷ್ಮಿ' ಒಪ್ಪಲಾರದ ಮನಸಿನಿಂದ ಒಪ್ಪಿದ್ದೇನೆ. ನನ್ನ ಮಗಳು ಚಿಕ್ಕವಳಿದ್ದಾಳೆ ನಾಲ್ಕಾರು ವರ್ಷ ತಾಯಿಯಾಗಿ ನಾನು ಅವಳ ಜೊತೆ ಇರಬೇಕು ಎಂದುಕೊಂಡಿದ್ದೆ. ಕಲರ್ಸ್ ತಂಡ ಈ ಪಾತ್ರ ಮಾಡಲೇಬೇಕು ಎಂದು ನೀಡಿದ್ದಾರೆ.

**◆ 'ಕಾವೇರಿ' ನಿಮ್ಮ ಭಾವಕೋಶದಲ್ಲಿ ಆರಾಧನೆಯ ರೂಪ ಪಡೆದಿದೆ. ಅಂತಹ ಹೆಸರನ ಪಾತ್ರ ನಿರ್ವಹಣೆ ಹೇಗೆನಿಸುತ್ತದೆ?**

ಕಾವೇರಿ ನಮ್ಮ ತಾಯಿ. ಕೊಡವರು ಪ್ರಕೃತಿಯನ್ನು ಆರಾಧಿಸುತ್ತೇವೆ. ನಮ್ಮ ಜೀವನಾಡಿ–ಜೀವಜಲ ಕಾವೇರಿಯನ್ನು ತಲೆಮಾರುಗಳಿಂದ ಪೂಜಿಸುತ್ತಾ ಬಂದಿದ್ದೇವೆ. ಅದೇ ಹೆಸರಿನ ಪಾತ್ರ ಕ್ಷಣ ಭಾವುಕತೆಯನ್ನು ಹುಟ್ಟಿಸಿತ್ತು. ಆ ಹೆಸರಿಗೂ ನನಗೂ ಭಾವನಾತ್ಮಕ ಸಂಬಂಧ ಇದೆ. ತಾಯಿಯ ಹೆಸರಿನಲ್ಲಿಯೇ ತಾಯಿಯ ಪಾತ್ರವನ್ನು ಮಾಡುತ್ತಿದ್ದೇನೆ. ದೊಡ್ಡ ಹುಡುಗನ ತಾಯಿಯ ಪಾತ್ರ. ಅದಕ್ಕೆ ನ್ಯಾಯ ಸಲ್ಲಿಸುತ್ತೇನಾ ಎನ್ನುವ ಪ್ರಶ್ನೆ ಇತ್ತು. ಆ ಅನುಮಾನ ಹುಸಿಯಾಗಿದೆ. ನನಗೆ ಒಳ್ಳೆಯ ಹೆಸರನ್ನು ಅದು ತಂದುಕೊಟ್ಟಿದೆ. ತಿಂಗಳಲ್ಲಿ ಕೆಲವು ದಿನ ಕೆಲಸ ಇರುವುದಿಲ್ಲ. ವೃತ್ತಿಪರವಾಗಿ ಮೇಕಪ್ ಆರ್ಟಿಸ್ಟ್ ಅಧ್ಯಯನ ಮಾಡಿದ್ದೇನೆ. ಬಿಡುವಿನ ವೇಳೆ ಅದನ್ನೂ ಮಾಡುತ್ತೇನೆ.

**◆ ಪಾತ್ರಗಳ ಆಯ್ಕೆಯಲ್ಲಿ ಯಾವ ಅಂಶ ನಿಮಗೆ ಮುಖ್ಯ ಆಗುತ್ತದೆ.**

ಒಬ್ಬ ಕಲಾವಿದೆಯಾಗಿ ನನಗೆ ನಟನೆಗೆ ಅವಕಾಶ ಎಷ್ಟಿದೆ ಎಂದು ನೋಡುತ್ತೇನೆ. ಅದರ ನಂತರ ಪಾತ್ರ ಗಟ್ಟಿಯಾಗಿರಬೇಕು. ಅದು ವೀಕ್ಷಕರ ಜೊತೆ ಸಂಬಂಧವನ್ನು ಬೆಸೆದುಕೊಳ್ಳುತ್ತದೆ ಎನ್ನುವ ಭರವಸೆ ನನಗಾಗಬೇಕು. 'ಭಾಗ್ಯಲಕ್ಷ್ಮಿ'ಯಲ್ಲಿ ಕಾವೇರಿ ಪಾತ್ರವನ್ನು ಲೇಖಕರು ತುಂಬ ಚೆನ್ನಾಗಿ ರೂಪಿಸಿದ್ದಾರೆ.

ನನ್ನ ತಾಯಿ ಚಿಕ್ಕವಯಸ್ಸಿನಲ್ಲೇ ಭರತನಾಟ್ಯಕ್ಕೆ ಸೇರಿಸಿದ್ದರು. ಅಮ್ಮ ಕೂಡ ಡಾನ್ಸ್ ಮಾಡ್ತಾರೆ, ಹಾಡ್ತಾರೆ. ತುಂಬ ವರ್ಷಗಳ ಹಿಂದೆ ರಂಗಾಯಣದಲ್ಲಿ ರಂಗಭೂಮಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದೆ. ಅದು ನನ್ನನ್ನು ರಂಗಭೂಮಿಯಲ್ಲಿ ತೊಡಗುವಂತೆ ಮಾಡಿತು. ಮುಂದೆ ಕೂಡ ಅದನ್ನೇ ಮಾಡುತ್ತೇನೆ. ಟೀವಿ ನನ್ನನ್ನು ಈಗ ಕರೆದಿದೆ, ಬಂದಿದ್ದೇನೆ. ಪರ್ಯಾಯ ಕೆಲಸ ಒಂದಿರಬೇಕು ಅನ್ನುವುದು ಇಲ್ಲಿ ಅರ್ಥ ಆಗಿದೆ.

**■ ರಾಘವೇಂದ್ರ ಕೆ.**